REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 । ಸಂಚಿಕೆ : 09 । ಜೂನ್ 8, 2022 । ಬುಧವಾರ । ಪುಟಗಳು : 8 । ಬೆಲೆ : 2/-

## ದಿನಾಂಕ : 25.06.2022ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ

## ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಎಸ್‌ಟಿಸಿಐ ಪ್ರೈಮರಿ ಡೀಲರ್ ಲಿ., ಇವರ ಸಹಯೋಗದೊಂದಿಗೆ ದಿನಾಂಕ : 25ನೇ ಜೂನ್ 2022ರ ಶನಿವಾರದಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮಹಾಮಂಡಳದ ಕೆ.ಎಚ್. ಪಾಟೀಲ ಸಭಾಂಗಣ, ನಂ.132, ಕೆ.ಎಚ್.ರಸ್ತೆ, ಬೆಂಗಳೂರು–560027 ಇಲ್ಲಿ ಏರ್ಪಡಿಸಲಾಗಿದೆ.

ಈ ವಿಚಾರ ಸಂಕಿರಣದಲ್ಲಿ Fixed Income Markets in India- Current Trends, Themes & Perspectives. Investment Management. Credit Management. Recent RBI Issues ವಿಷಯಗಳ ಕುರಿತು ನುರಿತ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು.

ಈ ವಿಚಾರ ಸಂಕಿರಣದಲ್ಲಿ ಒಂದು ಬ್ಯಾಂಕಿನಿಂದ ಗರಿಷ್ಠ 3 ಜನರು ಭಾಗವಹಿಸಬಹುದಾಗಿದೆ. ಭಾಗವಹಿಸುವ ಪ್ರತಿನಿಧಿಗಳು ದಿನಾಂಕ : 22.06.2022 ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳುವಂತೆ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ತಿಳಿಸಿರುತ್ತಾರೆ.

## ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ (Management Development Programme)ಯನ್ನು ಏರ್ಪಡಿಸಿರುವ ಕುರಿತು

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಐದು ದಿನಗಳ ಉನ್ನತ ಮಟ್ಟದ "ನಿರ್ವಹಣೆ ಅಭಿವೃದ್ಧಿ ತರಬೇತಿ" (Management Development Programme) ಯನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಈ ದೀರ್ಘಾವಧಿಯ ತರಬೇತಿಯನ್ನು ಏರ್ಪಡಿಸಲಾಗಿದೆ.

ಈ ತರಬೇತಿಯನ್ನು ದಿನಾಂಕ : 20.06.2022 ರಂದು ಬೆಳಿಗ್ಗೆ 09.00 ಗಂಟೆಯಿಂದ ದಿನಾಂಕ : 24.06.2022ರ ಸಾಯಂಕಾಲ 05.30 ಗಂಟೆಯವರೆಗೆ ಒಟ್ಟು ಐದು ದಿನಗಳ ಕಾಲ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ) ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560 070 ಇಲ್ಲಿ ಏರ್ಪಡಿಸಲಾಗಿದೆ.

ಈ ತರಬೇತಿ ಶಿಬಿರದಲ್ಲಿ ಊಟ–ತಿಂಡಿ, ವಸತಿ ಸೌಕರ್ಯ ಮತ್ತು ಉಪನ್ಯಾಸಕರ ವ್ಯವಸ್ಥೆ, ಹಿನ್ನೆಲೆಯ ಪತ್ರ, ತರಬೇತಿ ಪ್ರಮಾಣಪತ್ರ ಇತ್ಯಾದಿಗಳು ಒಳಗೊಂಡಿರುತ್ತದೆ. ಈ ಸದರಿ ತರಬೇತಿ ಶಿಬಿರಕ್ಕೆ ಪ್ರತಿನಿಧಿ ಶುಲ್ಕ ನಿಗದಿಪಡಿಸಲಾಗಿದೆ. ಪ್ರತಿ ಪ್ರತಿನಿಧಿಗೆ ರೂ.5,000/– ಗಳು ಮತ್ತು ಜಿಎಸ್‌ಟಿ ತೆರಿಗೆ 18% ಸೇರಿಸಿ ಒಟ್ಟು ರೂ.5,900/–ಗಳನ್ನು ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಚೆಕ್ / ಡಿಡಿ ಅಥವಾ ಎನ್‌ಇಎಫ್‌ಟಿ ಮುಖಾಂತರ ದಿನಾಂಕ : 15.06.2022ರೊಳಗಾಗಿ ಮಹಾಮಂಡಳದಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಈ ಐದು ದಿನಗಳ ತರಬೇತಿ ಶಿಬಿರದಲ್ಲಿ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ನೋಂದಾಯಿಸಿದ ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿರುತ್ತದೆ. ಈ ತರಬೇತಿ ಶಿಬಿರದಲ್ಲಿ ಸದರಿ ತರಬೇತಿಗೆ ನೋಂದಾಯಿಸಿದ ಪ್ರತಿನಿಧಿಗಳು ಭಾಗವಹಿಸಿ, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಯವರು ತಿಳಿಸಿರುತ್ತಾರೆ.

ಮೇನಲ್ಲಿ ರೂ.1.41 ಲಕ್ಷ ಕೋಟಿ ಜಿಎಸ್‌ಟಿ ವರಮಾನ ಸಂಗ್ರಹ 2
ದಿ ಸಿಂದಗಿ ಪಟ್ಟಣ ಸಹಕಾರಿ ಬ್ಯಾಂಕ್ : ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ 4
ನಿಮ್ಮ ಪ್ರಶ್ನೆ – ನಮ್ಮ ಉತ್ತರ 7



## ಅತ್ಮೀಯ ಸಹಕಾರಿಗಳೇ...

# ನೈಜ ಕಾಳಜಿ ವಹಿಸಿ ಕಪ್ಪತ್ತ ಗುಡ್ಡದಂತೆ ಭೂಮಿಯನ್ನೂ ಉಳಿಸಿಕೊಳ್ಳೋಣ ಬನ್ನಿ

ದಶಕಗಳ ಹಿಂದೆ ಮಾನವನ, ಜಲಚರಗಳ, ಖಗ-ಮೃಗಗಳ ಅಕಾಲಿಕ ಸಾವಿಗೆ ಕಾರಣ ಹುಡುಕುತ್ತಿದ್ದ ಪರಿಸರ ವಿಜ್ಞಾನಿಗಳಿಗೆ ಪರಿಸರ ನಾಶವಾಗುತ್ತಿರುವುದು ಅರಿವಿಗೆ ಬಂತು. ಇದನ್ನು ತಡೆಯದಿದ್ದರೆ, ಭೂವಾಸಿಗಳಿಗೆ ಉಳಿಗಾಲವಿಲ್ಲ ಎನ್ನುವುದು ಅವರಿಗೆ ಅರಿವಾಯಿತು. ನಿಜ ಹೇಳಬೇಕೆಂದರೆ, ಪರಿಸರ ಮಾಲಿನ್ಯಕ್ಕೆ ಮುಖ್ಯ ಕಾರಣವೇ, ಮಾನವನ ಭೋಗದ ಜೀವನ. ಇದು ತೀವ್ರಗತಿಯಲ್ಲಿ ಪರಿಸರ ವಿನಾಶಕ್ಕೆ ಕಾರಣವಾಯಿತು. ಇದನ್ನು ಅರಿತ ಮಹಾತ್ಮ ಗಾಂಧೀಜಿ ಅವರು ಅಂದೇ ಹೇಳಿದರು; ಪ್ರಕೃತಿ ಇರುವುದು ಮನುಷ್ಯನ ಆಸೆ ತೀರಿಸಲೇ ಹೊರತು ದುರಾಸೆಯನಲ್ಲ.

ನೋಡಿ; ನಮ್ಮ ಗದಗ ಜಿಲ್ಲೆಯ ಮುಂಡರಗಿ ತಾಲೂಕಿಗೆ ಸೇರಿದ ಕಪ್ಪತ್ತಗುಡ್ಡವಿದೆ. ಇಲ್ಲಿ ಅನೇಕ ಬಗೆಯ ವೈವಿಧ್ಯಮಯ ಗಿಡಮೂಲಿಕೆಗಳಿವೆ. ಸುಮಾರು 17,000 ಎಕರೆ ಪ್ರದೇಶ ಹರಡಿಕೊಂಡಿರುವ ಇಲ್ಲಿ 21,000 ವಿವಿಧ ಬಗೆಯ ಔಷಧಿಯ ಸಸ್ಯಗಳಿವೆ, ಇಲ್ಲಿ ಮ್ಯಾಂಗನಿಸ್ ಖನಿಜ ಹೇರಳವಾಗಿದೆ. ಎಪ್ಪತ್ತ ಗಿರಿ ನೋಡೊದಕ್ಕಿಂತ ಕಪ್ಪತಗಿರಿ ನೋಡು ಅನ್ನೋದು ನಮ್ಮ ಭಾಗದಲ್ಲಿನ ಜನರ ಮಾತು. ಈ ಗುಡ್ಡದ ಸಾಲು ಬಿಂಕದಕಟ್ಟಿಯಿಂದ ಆರಂಭವಾಗಿ ತುಂಗಭದ್ರಾ ತಟದವರೆಗೂ ಒಟ್ಟು 65ಕಿ.ಮೀ ಚಾಚಿಕೊಂಡಿದೆ. ಸಮುದ್ರದ ಮಟ್ಟದಿಂದ 937 ಕಿ.ಮೀ ಎತ್ತರದಲ್ಲಿರುವ ಇಲ್ಲಿ ಏಷ್ಯಾದಲ್ಲೇ ಅತಿ ಹೆಚ್ಚು ಗಾಳಿ ಬೀಸುವ ಪ್ರದೇಶ ಅನ್ನುವ ಹೆಗ್ಗಳಿಕೆನೂ ಇದೆ.

ಕೆಲ ವರ್ಷಗಳ ಹಿಂದೆ ಔಷಧಿಯ ಸಸ್ಯ, ಖನಿಜ ಸಂಪತ್ತಿನ ಮೇಲೆ ಔಷಧಿ ತಯಾರಕರ, ಗಣಿ ಲೂಟಿಕೋರರ ಕಣ್ಣು ಬಿದ್ದ ಫಲವಾಗಿ ಕಪ್ಪತ್ತಗುಡ್ಡದ ವಿನಾಶ ಆರಂಭವಾಯಿತು, ಕಪ್ಪತ್ತ ಗುಡ್ಡಕ್ಕೆ ಬೆಂಕಿ ಬಿತ್ತು. ಕೂಡಲೆ ಜಾಗೃತರಾದ ಪರಿಸರವಾದಿಗಳು, ಸ್ಥಳೀಯ ಪ್ರಜ್ಞಾವಂತರು ಸೇರಿ ನಡೆಸಿದ ಹೋರಾಟಕ್ಕೆ ಮಣಿದ ಸರ್ಕಾರ ಕಪ್ಪತ್ತಗುಡ್ಡವನ್ನು ವನ್ಯಜೀವಿ ಸಂರಕ್ಷಣಾಧಾಮ ಎಂದು ಘೋಷಿಸಿತು. ಇದರಿಂದ ಗಣಿಗಾರಿಕೆ ನಿಂತಿತು.

ಕಾಲ ಕಳೆದಂತೆ ಇದರಿಂದ ಇಲ್ಲಿನ ವನ್ಯ ಸಂಪತ್ತು ವೃದ್ಧಿಸಿದ್ದು, ಕಪ್ಪತಗುಡ್ಡದಲ್ಲಿ ಕತ್ತೆಕಿರುಬ, ತೋಳ, ಚಿರತೆ, ಕಾಡುಕುರಿ, ನವಿಲು ಮೊದಲಾದ ಪ್ರಾಣಿಗಳ ಸಂತತಿ ಹೆಚ್ಚಾಗಿದೆ. ಔಷಧೀಯ ಸಸ್ಯಗಳು ಕಂಗೊಳಿಸುತ್ತಿವೆ. ಕಪ್ಪತಗುಡ್ಡದ ಹಸಿರು ಸಮೃದ್ಧವಾಯಿತು. ಇದರಿಂದ ಜಿಲ್ಲೆಯ ಹವಾಮಾನದಲ್ಲೂ ಬದಲಾವಣೆ ಕಂಡುಬಂದಿದ್ದು, ಉತ್ತಮ ಗುಣಮಟ್ಟದ ಗಾಳಿಯನ್ನು ಹೊಂದಿರುವ ನಗರಗಳ ಪೈಕಿ ನಮ್ಮ ಗದಗ ಕೂಡ ಒಂದಾಗಿದೆ.

ಜೂನ್ ಬಂದರೆ, ಬರಿ ಭಾಷಣ, ಘೋಷಣೆ ಮಾಡಿ ಮರೆತರೆ, ಪರಿಸರ ಉಳಿಯುವುದಿಲ್ಲ ಎನ್ನುವುದನ್ನು ನಾವು ಅರಿಯಬೇಕಿದೆ. ನೈಜ ಕಾಳಜಿಯಿಂದ ನಮ್ಮ ಸನಿಹದ ಪರಿಸರ ಉಳಿಸಿಕೊಳ್ಳಬಹುದು ಎನ್ನುವುದನ್ನು ನಮ್ಮ ಕಪ್ಪತ್ತಗುಡ್ಡ ತೋರಿಸಿ ಕೊಟ್ಟಿದೆ. ಪರಿಸರ ಉಳಿಸುವ ನೈಜ ಕಾಳಜಿ ಇದ್ದರೆ, ನಾವೂ ಉಳಿಯುತ್ತೇವೆ. ಇಲ್ಲದಿದ್ದರೆ, ಎಲ್ಲವೂ ನಾಶ. ಪರಿಸರ ದಿನ ಆಚರಣೆಗೆ ಬಂದು ಐವತ್ತು ವರ್ಷಗಳಾಗಿದೆ, ಈ ಬಾರಿ ಒಂದೇ ಭೂಮಿ ಎನ್ನುವ ಘೋಷಣೆ ವಿಶೇಷವಾಗಿದೆ. ಹೌದು ನಮಗಿರುವುದು ಒಂದೇ ಭೂಮಿ. ನೈಜ ಕಾಳಜಿ ವಹಿಸಿ ಕಪ್ಪತ್ತ ಗುಡ್ಡದಂತೆ ಭೂಮಿಯನ್ನೂ ಉಳಿಸಿಕೊಳ್ಳೋಣ ಬನ್ನಿ.

ಎಚ್.ಕೆ. ಪಾಟೀಲ
ಅಧ್ಯಕ್ಷರು

# ಮೇನಲ್ಲಿ ರೂ.1.41 ಲಕ್ಷ ಕೋಟಿ ಜಿಎಸ್‌ಟಿ ವರಮಾನ ಸಂಗ್ರಹ

**ನವದೆಹಲಿ :** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಡಿ ಮೇ ತಿಂಗಳಿನಲ್ಲಿ ರೂ.1.41 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. 2021ರ ಮೇನಲ್ಲಿ ಸಂಗ್ರಹ ಆಗಿದ್ದ ಮೊತ್ತಕ್ಕೆ ಹೋಲಿಸಿದರೆ ಈ ಬಾರಿ ಶೇ 44ರಷ್ಟು ಹೆಚ್ಚಳ ಆಗಿದೆ. 2021ರ ಮೇನಲ್ಲಿ ರೂ.97,821 ಕೋಟಿ ವರಮಾನ ಸಂಗ್ರಹ ಆಗಿತ್ತು.

ಆದರೆ, 2022ರ ಏಪ್ರಿಲ್‌ನಲ್ಲಿ ರೂ.1.68 ಲಕ್ಷ ಕೋಟಿಯಷ್ಟು ದಾಖಲೆಯ ತೆರಿಗೆ ವರಮಾನ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಮೇನಲ್ಲಿ ರೂ.27 ಸಾವಿರ ಕೋಟಿ ಕಡಿಮೆ ಸಂಗ್ರಹ ಆಗಿದೆ. ಹೀಗಿದ್ದರೂ ಜಿಎಸ್‌ಟಿ ವ್ಯವಸ್ಥೆಯು ಜಾರಿಗೆ ಬಂದಾಗಿನಿಂದ ಈವರೆಗೆ ಸಂಗ್ರಹ ಆಗಿರುವ ನಾಲ್ಕನೇ ಗರಿಷ್ಠ ಮೊತ್ತ ಇದಾಗಿದೆ.

2022ರ ಮೇನಲ್ಲಿ ಸಂಗ್ರಹ ಆಗಿರುವ ಒಟ್ಟಾರೆ ಮೊತ್ತದಲ್ಲಿ ಸಿಜಿಎಸ್‌ಟಿ ರೂ. 25,036 ಕೋಟಿ, ಸಿಜಿಎಸ್‌ಟಿ ರೂ.32,001 ಕೋಟಿ, ಐಜಿಎಸ್‌ಟಿ ರೂ.73,345 ಕೋಟಿ ಹಾಗೂ ಸೆಸ್ 10,502 ಕೋಟಿ ಸೇರಿಕೊಂಡಿದೆ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಮೇ ತಿಂಗಳಿನಲ್ಲಿ ಆಗುವ ವರಮಾನ ಸಂಗ್ರಹವು ಹೊಸ ಹಣಕಾಸು ವರ್ಷದ ಏಪ್ರಿಲ್‌ತಿಂಗಳಲ್ಲಿ ಸಲ್ಲಿಕೆ ಆಗಿರುವ ರಿಟರ್ನ್ಸ್‌ಗೆ ಸಂಬಂಧಿಸಿದ್ದಾಗಿರುತ್ತದೆ. ಆದರೆ, ಏಪ್ರಿಲ್‌ನಲ್ಲಿ ಸಂಗ್ರಹ ಆಗುವ ವರಮಾನವು ಹಣಕಾಸು ವರ್ಷದ ಕೊನೆಯ ತಿಂಗಳಾದ ಮಾರ್ಚ್‌ಗೆ ಸಂಬಂಧಿಸಿದ್ದಾಗಿರುತ್ತದೆ. ಹೀಗಾಗಿ ಯಾವಾಗಲೂ ಮೇನಲ್ಲಿ ಸಂಗ್ರಹ ಆಗುವ ಮೊತ್ತವು ಏಪ್ರಿಲ್‌ಗಿಂತಲೂ ಕಡಿಮೆ ಇರುತ್ತದೆ ಎಂದು ಹೇಳಿದೆ.

ಏಪ್ರಿಲ್‌ನಲ್ಲಿ 7.4 ಕೋಟಿ ಇ-ವೇ ಬಿಲ್ ಸೃಷ್ಟಿ ಆಗಿದೆ. ಮಾರ್ಚ್‌ನಲ್ಲಿ ಸೃಷ್ಟಿ ಆಗಿದ್ದ 7.7 ಕೋಟಿ ಇ-ವೇ ಬಿಲ್‌ಗೆ ಹೋಲಿಸಿದರೆ ಶೇ 4ರಷ್ಟು ಕಡಿಮೆ ಆಗಿದೆ.

'ಜಿಎಸ್‌ಟಿ ಸಂಗ್ರಹವು ಮೂರು ತಿಂಗಳಿನಲ್ಲಿ ರೂ.1.4 ಲಕ್ಷ ಕೋಟಿಯನ್ನು ದಾಟಿರುವುದು ಆರ್ಥಿಕ ಬೆಳವಣಿಗೆಯನ್ನು ಸೂಚಿಸುತ್ತಿದೆ' ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ಎಂ.ಎಸ್. ಮಣಿ ಅಭಿಪ್ರಾಯಪಟ್ಟಿದ್ದಾರೆ.

'ತಿಂಗಳ ಜಿಎಸ್‌ಟಿ ಸಂಗ್ರಹವು ರೂ. 1.5 ಲಕ್ಷ ಕೋಟಿ ದಾಟಬೇಕು ಎನ್ನುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಗುರಿ ತಲುಪಲು ಬೇಕಾದ ವೇದಿಕೆ ಸಿದ್ಧವಾಗಿರುವಂತೆ ಕಾಣುತ್ತಿದೆ' ಎಂದು ಟ್ಯಾಕ್ಸ್ ಕನೆಕ್ಟ್ ಅಡ್ವೈಸರಿ ಪಾಲುದಾರ ವಿವೇಕ್ ಜಲನ್ ಹೇಳಿದ್ದಾರೆ.

## ಸಹಕಾರ ಲೆಕ್ಕಪರಿಶೋಧನಾ ಇಲಾಖೆ ಅಧಿಕಾರಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆ : ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರಿಂದ ಅಭಿನಂದನೆ ಸಲ್ಲಿಕೆ

**ಬೆಂಗಳೂರು** : ಕೇಂದ್ರದ ನಾಗರೀಕ ಸೇವಾ ಪರೀಕ್ಷೆಯಲ್ಲಿ 151ನೇ ರ್‍ಯಾಂಕಿನಲ್ಲಿ ತೇರ್ಗಡೆ ಹೊಂದಿರುವ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಸಹಾಯಕ ನಿರ್ದೇಶಕ ವಿನಯ್ ಕುಮಾರ್ ಗಾದಗೆ ಅವರನ್ನು ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಅವರು ಅಭಿನಂದಿಸಿ ಶುಭಕೋರಿದರು.

ಮೂಲತಃ ಬೀದರ್ ನಗರದವರಾದ ವಿನಯ್ ಕುಮಾರ್ ಅವರು ಎಂ.ಬಿ.ಬಿ.ಎಸ್. ಪದವೀಧರರು. 2019ರ ಕರ್ನಾಟಕದ ನಾಗರಿಕ ಸೇವಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಬೆಂಗಳೂರಿನಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿದ್ದಾರೆ. ನಾಗರಿಕ ಸೇವೆಯಲ್ಲಿ ಇನ್ನೂ ಹೆಚ್ಚಿನ ಯಶಸ್ಸು, ಉನ್ನತ ಸ್ಥಾನಮಾನ ಸಿಗಲಿ ಎಂದು ಸಹಕಾರ ಸಚಿವರು ಶುಭಕೋರಿದರು.



## ಆರ್ಥಿಕ ಬೆಳವಣಿಗೆ ಶೇ 8.7, ಜಿಡಿಪಿಯ ವಿತ್ತೀಯ ಕೊರತೆ 6.7%

2021-22ನೇ ಸಾಲಿನ ಆರ್ಥಿಕ ಪ್ರಗತಿ ಶೇ 8.7ರಷ್ಟು ದಾಖಲಾಗಿದ್ದು, ಮಾರ್ಚ್ ತಿಂಗಳ ನಿವ್ವಳ ತಲಾ ಆದಾಯ (ಜಿಡಿಪಿ) ಶೇ 4.1ರಷ್ಟಿದೆ. 2021-22ರ ಆರ್ಥಿಕ ಬೆಳವಣಿಗೆಯು 2020-21 ರಲ್ಲಿ ದಾಖಲಾದ ಶೇಕಡಾ 6.6ರ ನೆಗಟಿವ್ ಬೆಳವಣಿಗೆಗಿಂತ ಸುಧಾರಣೆ ಕಂಡು ಬಂದಿದೆ. ಇದೇ ವೇಳೆ, ಮಾರ್ಚ್ ತ್ರೈಮಾಸಿಕ (2021-22) ದಲ್ಲಿ ಶೇ.4.1ರಷ್ಟು ಬೆಳವಣಿಗೆ ಕಂಡು ಬಂದಿದ್ದು, 2020-21ರ ಮಾರ್ಚ್ ತ್ರೈಮಾಸಿಕದಲ್ಲಿ ಕಂಡುಬಂದಿರುವ ಬೆಳವಣಿಗೆಗೆ ಹೋಲಿಸಿದರೆ, ಅಲ್ಪ ಪ್ರಮಾಣದಲ್ಲಿ ಶೇ.1.6ರಷ್ಟು ಹೆಚ್ಚಳ ಕಂಡಿದೆ.

ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ (MoSPI) ಅಂದಾಜಿಸಿರುವ 8.9 ಶೇಕಡಾ ಬೆಳವಣಿಗೆಗಿಂತ 2021-22ರ GDP projection ಕಡಿಮೆ ಬಂದಿದೆ. ಯೋಜಿತ 8.7 ರಷ್ಟು ಬೆಳವಣಿಗೆಯು ಭಾರತೀಯ ರಿಸರ್ವ್ ಬ್ಯಾಂಕ್ (RBI) 2021-22ರ GDP ಬೆಳವಣಿಗೆಯ ಶೇಕಡಾ 9.5ರ ಅಂದಾಜಿಗಿಂತ ಕಡಿಮೆಯಾಗಿದೆ.

ಮಾರ್ಚ್ ತ್ರೈಮಾಸಿಕ ಬೆಳವಣಿಗೆಯು ಈ ಅವಧಿಗೆ ಆರ್‌ಬಿಐನ ನಿರೀಕ್ಷೆಗಿಂತ ಕಡಿಮೆಯಾಗಿದೆ, ಇದು ಶೇಕಡಾ 6.1 ಎಂದು ಅಂದಾಜಿಸಲಾಗಿದೆ. ಮಂಗಳವಾರ ದಂದು ಬಿಡುಗಡೆಯಾದ ಸರ್ಕಾರಿ ಅಂಕಿ ಅಂಶಗಳ ಪ್ರಕಾರ, 2021-22ರ ವಿತ್ತೀಯ ಕೊರತೆಯು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) 6.71 ಪ್ರತಿಶತದಷ್ಟು ಬಂದಿದೆ. ಇದು ಪರಿಷ್ಕೃತ ಬಜೆಟ್ ಅಂದಾಜುಗಳಲ್ಲಿ ಹಣಕಾಸು ಸಚಿವಾಲಯವು ಅಂದಾಜು ಮಾಡಿದ ಶೇಕಡಾ 6.9ಕ್ಕಿಂತ ಕಡಿಮೆಯಾಗಿದೆ.

2021-22ರ ಅಂತ್ಯದ ವೇಳೆಗೆ ಆದಾಯ ಕೊರತೆಯು ಶೇಕಡಾ 4.37 ರಷ್ಟಿತ್ತು. FY 22 ಗಾಗಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು 6.7 ಶೇಕಡಾಕ್ಕೆ ಬಂದಿದೆ, ಪರಿಷ್ಕೃತ ಗುರಿಯನ್ನು 20 ಮೂಲಾಂಶದಂತೆ ಕಡಿಮೆ ಮಾಡಲಾಗಿದೆ ಎಂದು ನಿಯಂತ್ರಕ ಜನರಲ್ ಆಫ್ ಅಕೌಂಟ್ಸ್ ಮೇ 31 ರಂದು ಬಿಡುಗಡೆ ಮಾಡಿದ ಡೇಟಾ ತೋರಿಸಿದೆ. ಕಳೆದ ಹಣಕಾಸು ವರ್ಷದಲ್ಲಿ, ಫೆಬ್ರವರಿ 2021 ರಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಸರ್ಕಾರವು ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇಕಡಾ 6.8 ಕ್ಕೆ ನಿಗದಿಪಡಿಸಿತ್ತು.

2022ರ ಬಜೆಟ್‌ನಂತೆ ವಿತ್ತೀಯ ಕೊರತೆಯನ್ನು 15.91 ಲಕ್ಷ ಕೋಟಿ ರೂ.ಗೆ ಪರಿಷ್ಕರಿಸಲಾಯಿತು. ಅದರಂತೆ, 15.87 ಲಕ್ಷ ಕೋಟಿ ರೂಪಾಯಿಗಳ ಕೊರತೆಯು ಗುರಿಗಿಂತ 4,552 ಕೋಟಿ ಕಡಿಮೆಯಾಗಿದೆ. ಮೇ 31 ರಂದು ಬಿಡುಗಡೆಯಾದ ಅಂಕಿಅಂಶಗಳ ಪ್ರಕಾರ, ಕೇಂದ್ರವು 2.70 ಲಕ್ಷ ಕೋಟಿ ರೂಪಾಯಿಗಳ ವಿತ್ತೀಯ ಕೊರತೆಯನ್ನು ದಾಖಲಿಸಿದೆ.

ಮಾರ್ಚ್ 2021 ರಲ್ಲಿ, ಕೇಂದ್ರವು 4.13 ಲಕ್ಷ ಕೋಟಿ ರೂಪಾಯಿಗಳ ವಿತ್ತೀಯ ಕೊರತೆಯನ್ನು ಪ್ರಕಟಿಸಿತ್ತು.

## ಜಿಎಸ್‌ಟಿ ಪರಿಹಾರ : ರಾಜ್ಯಕ್ಕೆ ರೂ.8,633 ಕೋಟಿ ಬಿಡುಗಡೆ - ಕೇಂದ್ರ

**ನವದೆಹಲಿ :** ರಾಜ್ಯಗಳಿಗೆ ನೀಡಬೇಕಿದ್ದ ಜಿಎಸ್‌ಟಿ ಪರಿಹಾರದ ಬಾಕಿ ಮೊತ್ತ ರೂ.86,912 ಕೋಟಿಯನ್ನು ಬಿಡುಗಡೆ ಮಾಡಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಇದರಲ್ಲಿ ಕರ್ನಾಟಕ ರಾಜ್ಯದ ಪಾಲು ರೂ.8,633 ಕೋಟಿ ಇದೆ. ಮಹಾರಾಷ್ಟ್ರ ರಾಜ್ಯಕ್ಕೆ ಅತಿ ಹೆಚ್ಚಿನ ರೂ.14,145 ಕೋಟಿ ಜಿಎಸ್‌ಟಿ ಪರಿಹಾರ ದೊರೆತಿದೆ.

ಒಟ್ಟಾರೆ ಮೊತ್ತದಲ್ಲಿ ರೂ.25 ಸಾವಿರ ಕೋಟಿಯನ್ನು ಜಿಎಸ್‌ಟಿ ಪರಿಹಾರ ನಿಧಿಯಿಂದ ನೀಡಲಾಗಿದೆ. ಉಳಿದ ರೂ.61,912 ಕೋಟಿಯನ್ನು ಕೇಂದ್ರವು ತನ್ನ ಸೆಸ್ ಸಂಗ್ರಹದಿಂದ ನೀಡಿದೆ ಎಂದು ಹಣಕಾಸು ಸಚಿವಾಲಯವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ಒಟ್ಟಾರೆ ಮೊತ್ತದಲ್ಲಿ ಏಪ್ರಿಲ್ - ಮೇ ಅವಧಿಗೆ ರೂ.17,973 ಕೋಟಿ ಹಾಗೂ ಫೆಬ್ರುವರಿ - ಮಾರ್ಚ್ ಅವಧಿಗೆ ರೂ. 21,322 ಕೋಟಿ ಹಾಗೂ 2022ರ ಜನವರಿವರೆಗೆ ಬಾಕಿ ಉಳಿಸಿಕೊಂಡಿದ್ದ ರೂ.47,617 ಕೋಟಿ ಮೊತ್ತವು ಸೇರಿಕೊಂಡಿದೆ ಎಂದು ಅದು ಮಾಹಿತಿ ನೀಡಿದೆ.

## ದಿ ಸಿಂದಗಿ ಪಟ್ಟಣ ಸಹಕಾರಿ ಬ್ಯಾಂಕ್ : ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ



**ಸಿಂದಗಿ :** ದಿನಾಂಕ : 23.05.2022ರಂದು ಜರುಗಿದ ಸಿಂದಗಿ ಪಟ್ಟಣ ಸಹಕಾರಿ ಬ್ಯಾಂಕಿನ ಪದಾಧಿಕಾರಿಗಳ ಚುನಾವಣೆಯನ್ನು ಕುಮಾರಿ ಎಸ್.ಕೆ. ಭಾಗ್ಯಶ್ರೀ, ರಿಟರ್ನಿಂಗ್ ಆಫೀಸರ್ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಇಂಡಿ ಉಪವಿಭಾಗ, ಇಂಡಿ ಇವರು ಜರುಗಿಸಿದರು. ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಬಸವರಾಜ ಮಲ್ಲೇಶಪ್ಪ ಶಹಾಪೂರ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಸಿದ್ಲಿಂಗಪ್ಪ ಸಿದ್ದಪ್ಪ ವಡ್ಡೋಡಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರು ಹಾಗೂ ಬ್ಯಾಂಕಿನ ನಿರ್ದೇಶಕರಾದ ಶ್ರೀ ಶರಣಪ್ಪ ಎಸ್. ವಾರದ, ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಸುರೇಶಬಾಬು ಎಮ್. ಜೋಗೂರ, ಶ್ರೀ ಷಣ್ಮುಖಪ್ಪ ಎಸ್. ಸಂಗಮ, ಶ್ರೀ ನಿಹಾಲಚಂದ ಆರ್. ಪೋರವಾಲ, ಶ್ರೀ ಪ್ರಕಾಶ ಬಿ. ಕೋರಿ, ಶ್ರೀ ರವಿಕುಮಾರ ಎಸ್. ನಾಗೂರ, ಶ್ರೀ ಮಹಾದೇವಪ್ಪ ಸಿ. ಸಿಂದಗಿ, ಡಾ. ವಿಜಯಕುಮಾರ ಜಿ. ವಾರದ, ಶ್ರೀ ನೀಲಕಂಠ ಡಿ. ಗುಣಾರಿ, ಶ್ರೀ ಲಕ್ಷ್ಮಣ ಎಸ್. ದೊಡಮನಿ, ಶ್ರೀಮತಿ ಮಹಾದೇವಿ ಜಿ. ಬಮ್ಮಣ್ಣಿ, ಶ್ರೀಮತಿ ಮಹಾದೇವಿ ಸಿ. ಪಟ್ಟಣಶೆಟ್ಟಿ ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ.ಜಿ. ಬಮ್ಮಣ್ಣಿ ಸಭೆಯಲ್ಲಿ ಹಾಜರಿದ್ದರು.

## ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕಿನಿಂದ ಪ್ರತಿಭಾ ಪುರಸ್ಕಾರ ಸಮಾರಂಭ




**ಬೆಂಗಳೂರು :** ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇದರ ವತಿಯಿಂದ 2019-20 ಮತ್ತು 2020-21ನೇ ಸಾಲುಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನೆರವೇರಿಸಿದ್ದು, ಕಾರ್ಯಕ್ರಮದಲ್ಲಿ ಸುಮಾರು 400ಕ್ಕೂ ಹೆಚ್ಚು ಅರ್ಹ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಪುರಸ್ಕರಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಇ-ಮಾರ್ಕೆಟ್‌ನಲ್ಲಿ ಸಹಕಾರಿಗಳಿಗೆ ಅವಕಾಶ

**ನವದೆಹಲಿ :** ಗವರ್ನಮೆಂಟ್ ಇ-ಮಾರ್ಕೆಟ್ ಪ್ಲೇಸ್ (GeM)ಗೆ ಸಹಕಾರಿ ಸಂಸ್ಥೆಗಳಿಗೆ ಅವಕಾಶ ನೀಡುವ ಪ್ರಸ್ತಾವನೆಯನ್ನು ಕೇಂದ್ರ ಸಚಿವ ಸಂಪುಟ ಬುಧವಾರ ಅಂಗೀಕರಿಸಿದೆ. ಇದರೊಂದಿಗೆ ಸಹಕಾರಿಗಳು ಕೂಡ ಖರೀದಿದಾರರಾಗಿ ಇ-ಮಾರ್ಕೆಟ್ ಪ್ಲೇಸ್‌ನಲ್ಲಿ ನೋಂದಣಿ ಮಾಡಿಸಿಕೊಳ್ಳಬಹುದು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಹೇಳಿದರು.



ಪ್ರಸ್ತುತ ಸಹಕಾರಿ ಸಂಸ್ಥೆಗಳು ಈ ಪೋರ್ಟಲ್‌ನಲ್ಲಿ ಖರೀದಿದಾರರಾಗಿ ನೋಂದಣಿ ಮಾಡಲು ಅವಕಾಶವಿಲ್ಲ. ಸರ್ಕಾರದ ಈ ಹೊಸ ತೀರ್ಮಾನದಿಂದಾಗಿ 8.54ಲಕ್ಷಕ್ಕೂ ಹೆಚ್ಚಿನ ಸಹಕಾರಿ ಸಂಸ್ಥೆಗಳಿಗೆ ಮತ್ತು ಅವುಗಳ 27 ಕೋಟಿ ಸದಸ್ಯರಿಗೆ ಪ್ರಯೋಜನವಾಗಲಿದೆ. ಅವರು ಇ-ಮಾರ್ಕೆಟ್ ಪ್ಲೇಸ್‌ನಲ್ಲಿ ಸ್ಪರ್ಧಾತ್ಮಕ ದರದಲ್ಲಿ ಉತ್ಪನ್ನಗಳನ್ನು ಖರೀದಿಸಬಹುದಾಗಿದೆ.

ಪ್ರಸ್ತುತ (GeM) ಪೋರ್ಟಲ್‌ನಲ್ಲಿ ಸರಕು ಮತ್ತು ಸೇವೆಗಳಿಗೆ ಖಾಸಗಿ ಕ್ಷೇತ್ರದ ಖರೀದಿದಾರರು ನೋಂದಣಿ ಮಾಡುವಂತಿಲ್ಲ. ಆದರೆ, ಖಾಸಗಿ ಮತ್ತು ಸರ್ಕಾರದ ಎಲ್ಲ ಕ್ಷೇತ್ರಗಳ ಪೂರೈಕೆದಾರರು (ಮಾರಾಟಗಾರರು) ನೋಂದಣಿ ಮಾಡಬಹುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಲ್ಲ ಇಲಾಖೆ, ಸ್ವಾಯತ್ತ ಸಂಸ್ಥೆಗಳು, ಇಲಾಖೆಗಳು ಇದರ ಮೂಲಕ ಮುಕ್ತವಾಗಿ ಖರೀದಿಸಬಹುದಾಗಿದೆ. 2016ರ ಆ.9ಕ್ಕೆ ಈ ಪೋರ್ಟಲ್ ಅನ್ನು ಲೋಕಾರ್ಪಣೆ ಮಾಡಲಾಗಿದೆ.

# 2021–22ನೇ ಆರ್ಥಿಕ ವರ್ಷದಲ್ಲಿ ಶೇ.8.7ರಷ್ಟು ಬೆಳವಣಿಗೆ ದಾಖಲಿಸಿದ ಜಿಡಿಪಿ




**ನವದೆಹಲಿ :** ದೇಶದ ಅರ್ಥ ವ್ಯವಸ್ಥೆಯು ಜನವರಿ–ಮಾರ್ಚ್ ಅವಧಿಯಲ್ಲಿ ಶೇ.4.1ರಷ್ಟು ಬೆಳವಣಿಗೆ ಕಂಡಿದೆ. ಇದರಿಂದಾಗಿ 2021–22ನೆಯ ಆರ್ಥಿಕ ವರ್ಷದಲ್ಲಿ ಆರ್ಥಿಕ ಬೆಳವಣಿಗೆ ದರವು ಶೇ.8.7ರಷ್ಟು ಆದಂತಾಗಿದೆ. ತಯಾರಿಕೆ, ಗಣಿಗಾರಿಕೆ ಮತ್ತು ನಿರ್ಮಾಣ ವಲಯಗಳಲ್ಲಿ ಉತ್ತಮ ಬೆಳವಣಿಗೆ ಕಂಡುಬಂದಿದೆ. ಕೋವಿಡ್ ಸಾಂಕ್ರಾಮಿಕವು ಆರ್ಥಿಕ ಚಟುವಟಿಕೆಗಳ ಮೇಲೆ ಭಾರಿ ಏಟು ನೀಡಿದ ಕಾರಣ, 2020–21ನೆಯ ಆರ್ಥಿಕ ವರ್ಷದಲ್ಲಿ ಅರ್ಥ ವ್ಯವಸ್ಥೆಯು ಶೇ.(–)6.6ರಷ್ಟು ಕುಸಿತ ಕಂಡಿತ್ತು. ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿನ ಶೇ.4.1ರ ಬೆಳವಣಿಗೆಯು ಹಿಂದಿನ ಆರ್ಥಿಕ ವರ್ಷದಲ್ಲಿನ ಅತಿ ಕಡಿಮೆ ಬೆಳವಣಿಗೆ ದರ. ಹಿಂದಿನ ವರ್ಷದ ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಅರ್ಥ ವ್ಯವಸ್ಥೆಯು ಶೇ.2.5ರಷ್ಟು ಬೆಳವಣಿಗೆ ಸಾಧಿಸಿತ್ತು. ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು, 2021–22ರಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರ ಶೇ.8.9ರಷ್ಟು ಇರಲಿದೆ ಎಂದು ಫೆಬ್ರುವರಿಯಲ್ಲಿ ಅಂದಾಜು ಮಾಡಿತ್ತು. ಆದರೆ, ಅದು ಶೇ.8.7ರಷ್ಟು ಆಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ (2022–23) ಆರ್ಥಿಕ ಬೆಳವಣಿಗೆ ದರವು ಶೇ.8ರಿಂದ ಶೇ.8.5ರ ಮಟ್ಟದಲ್ಲಿ ಇರಲಿದೆ ಎಂದು ಆರ್ಥಿಕ ಸಮೀಕ್ಷೆ ವರದಿಯಲ್ಲಿ ಅಂದಾಜು ಮಾಡಲಾಗಿದೆ.

2021–22ರಲ್ಲಿ ತಯಾರಿಕಾ ವಲಯದಲ್ಲಿ ಶೇ.9.9 ರಷ್ಟು ಬೆಳವಣಿಗೆ ಆಗಿದೆ, ಗಣಿಗಾರಿಕೆ ಮತ್ತು ನಿರ್ಮಾಣ ವಲಯಗಳಲ್ಲಿ ಶೇ.11.5ರಷ್ಟು ಬೆಳವಣಿಗೆ ಆಗಿದೆ. 2020–21ರಲ್ಲಿ ಕುಸಿತ ದಾಖಲಾಗಿತ್ತು. 2021–22ರಲ್ಲಿ ಕೃಷಿ ಚಟುವಟಿಕೆಗಳ ಬೆಳವಣಿಗೆ ಪ್ರಮಾಣವು ಶೇ.3ಕ್ಕೆ ಕುಸಿದಿದೆ (ಹಿಂದಿನ ವರ್ಷದಲ್ಲಿ ಇದು ಶೇ.3.3ರಷ್ಟಿತ್ತು). ಎನ್ಎಸ್ಓ ನೀಡಿರುವ ಅಂಕಿ–ಅಂಶಗಳ ಪ್ರಕಾರ ತಲಾ ಆದಾಯವು 2021–22ರಲ್ಲಿ ರೂ.1.5 ಲಕ್ಷಕ್ಕೆ ಏರಿಕೆ ಆಗಿದ್ದು, ಶೇ.18.3 ರಷ್ಟು ಬೆಳವಣಿಗೆ ಕಂಡುಬಂದಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ ಇದು ರೂ.1.26 ಲಕ್ಷ ಆಗಿತ್ತು.

## ಆಧಾರ್ ದುರ್ಬಳಕೆ ತಡೆಯುವುದು ಹೇಗೆ



ಆಧಾರ್ ಕಾರ್ಡ್ ದುರ್ಬಳಕೆ ಬಗ್ಗೆ ಅದು ಶುರುವಾದಾಗಿನಿಂದಲೂ ಚರ್ಚೆ ನಡೆಯುತ್ತಲೇ ಇದೆ. ಎಲ್ಲಾ ರೀತಿಯ ಸವಲತ್ತು ಸೌಕರ್ಯ ಪಡೆಯಲು ಈಗ ಆಧಾರ್ ಕಡ್ಡಾಯ. ಹೀಗಿರುವಾಗ ಅದನ್ನು ಕೇಳಿದ ಸಂಸ್ಥೆಗಳಿಗೆ ಸಲ್ಲಿಸದೇ ಇರಲು ಸಾಧ್ಯವೇ ಇಲ್ಲ. ಹಾಗಾದರೆ ದುಷ್ಕರ್ಮಿಗಳ ಕೈಗೆ ಸಿಗುವ ಕಾರ್ಡ್ ದುರ್ಬಳಕೆಯಾಗದಂತೆ ತಡೆಯುವುದು ಹೇಗೆ? ಅದಕ್ಕಾಗಿಯೇ "ಮಾಸ್ಕ್ ಆಧಾರ್ ಕಾರ್ಡ್' ಎನ್ನುವ ಹೊಸ ಆವೃತ್ತಿ ಪರಿಚಯಿಸಲಾಗಿದೆ. ಅದು ಪಡೆಯುವುದು ಹೇಗೇ?

### ಮಾಸ್ಕ್ ಆಧಾರ್ ಡೌನ್‌ಲೋಡ್ ಮಾಡಿಕೊಳ್ಳುವ ಬಗೆ

01. Myaadhaar.uidai.gov.in ಭೇಟಿ ನೀಡಿ Login ಆಗಿ.
02. ನಿಮ್ಮ ಆಧಾರ್ ನಂಬರ್ ಎಂಟ್ರಿ ಮಾಡಿ ಮತ್ತು Captcha ಕೋಡ್ ನೋಂದಾಯಿಸಿ. ಬಳಿಕ 'ಸೆಂಡ್ ಒಟಿಪಿ' ಮೇಲೆ ಕ್ಲಿಕ್ ಮಾಡಿ.
03. ಆಧಾರ್ ಲಿಂಕ್ ಆದ ನಂಬರ್‌ಗೆ ಒಟಿಪಿ ಬರುತ್ತದೆ. ನಿಮಗೆ ಬೇಕಾದ ಸೇವಾ ಕ್ಷೇತ್ರಕ್ಕೆ ಪ್ರವೇಶ ಪಡೆಯಲು ಈ ಒಟಿಪಿ ನಂಬರ್ ಎಂಟ್ರಿ ಮಾಡುವ ಅಗತ್ಯ ಇದೆ.
04. ಸೇವಾ ವಿಭಾಗದಲ್ಲಿರುವ 'ಡೌನ್‌ಲೋಡ್ ಆಧಾರ್' ಎನ್ನುವ ಸೂಚಿಯ ಮೇಲೆ ಕ್ಲಿಕ್ ಮಾಡಿ.
05. ಡೆಮೊಗ್ರಾಫಿಕ್ ಡೇಟಾ ವಿಭಾಗದಲ್ಲಿ ಕಾಣಿಸುವ 'ನಿಮಗೆ ಮಾಸ್ಕ್ ಆಧಾರ್ ಬೇಕಾಗಿದೆಯೇ ಎನ್ನುವ ಆಪ್ಷನ್ ಅನ್ನು ಸೆಲೆಕ್ಟ್ ಮಾಡಿ.
06. ಬಳಿಕ 'ಡೌನ್‌ಲೋಡ್' ಮೇಲೆ ಕ್ಲಿಕ್ ಮಾಡಿ.
07. ಪಿಡಿಎಫ್ ಫಾರ್ಮೆಟ್‌ನಲ್ಲಿ ನಿಮ್ಮ ಮಾಸ್ಕ್ ಆಧಾರ್ ಡೌನ್‌ಲೋಡ್ ಆಗುತ್ತದೆ.
08. ಮಾಸ್ಕ್ ಆಧಾರ್‌ಗೆ ಪಾಸ್‌ವರ್ಡ್ ಹಾಕಿ ರಕ್ಷಣೆ ಮಾಡಬಹುದು.

### ಮಾಸ್ಕ್ ಆಧಾರ್ ಹೇಗಿರುತ್ತದೆ?

ನಿಮ್ಮ ಹೆಸರು, ವಿಳಾಸ, ಭಾವಚಿತ್ರ ಎಲ್ಲವನ್ನೂ ಯಥಾವತ್ ಒಳಗೊಳ್ಳುವ ಇದು ನಂಬರ್‌ನಲ್ಲಿ ಮಾತ್ರ ವ್ಯತ್ಯಾಸ ಇರುತ್ತದೆ. ಆಧಾರ್ ಕಾರ್ಡ್‌ನ ಕೊನೆಯ ನಾಲ್ಕು ಸಂಖ್ಯೆಗಳು ಮಾತ್ರವೇ ಗೋಚರ ಆಗುವಂತಿರುತ್ತವೆ. ಮೊದಲಿನ 08 ಸಂಖ್ಯೆಗಳನ್ನು ಮರೆ ಮಾಡಲಾಗಿರುತ್ತದೆ.

## ಸಾಂಸ್ಥಿಕ ಸುಧಾರಣೆಗೆ ಆರ್‌ಬಿಐ ಒತ್ತು

**ಮುಂಬೈ :** ಹಣದುಬ್ಬರ ಒತ್ತಡ ಹೆಚ್ಚುತ್ತಿರುವ ಬೆನ್ನಲ್ಲೇ ಸುಸ್ಥಿರ ಆರ್ಥಿಕ ಬೆಳವಣಿಗೆ ಸಾಧಿಸಲು ಸಾಂಸ್ಥಿಕ ಸುಧಾರಣೆಯ ಅಗತ್ಯ ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಹೇಳಿದೆ.

ಸಗಟು ಹಣದುಬ್ಬರವು (ಡಬ್ಲ್ಯುಪಿ) ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಚಿಲ್ಲರೆ ಹಣದುಬ್ಬರದ ಮೇಲೆ ಒತ್ತಡವು ನಿಧಾನವಾಗಿ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಆರ್‌ಬಿಐ ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ. ಕೈಗಾರಿಕೆಗಳಲ್ಲಿ ಬಳಸುವ ಕಚ್ಚಾ ಸಾಮಗ್ರಿಗಳ ದರವು ಗರಿಷ್ಠ ಮಟ್ಟದಲ್ಲಿದೆ. ಸಾರಿಗೆ ಮತ್ತು ಸಾಗಣೆ ವೆಚ್ಚಗಳು ಹೆಚ್ಚಾಗಿವೆ. ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆಯು ಹಣದುಬ್ಬರದ ಮೇಲೆ ಇನ್ನಷ್ಟು ಪರಿಣಾಮ ಉಂಟು ಮಾಡಲಿದೆ ಎಂದು ಹೇಳಿದೆ.

ಉಕ್ರೇನ್ ಬಿಕ್ಕಟ್ಟಿನಿಂದಾಗಿ ಸರಕುಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗಿದ್ದು, ಭಾರತವನ್ನೂ ಒಳಗೊಂಡು ಜಾಗತಿಕ ಮಟ್ಟದಲ್ಲಿ ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗುತ್ತಿದೆ ಎಂದು ವಿವರಿಸಿದೆ. ಹಣದುಬ್ಬರ ನಿಯಂತ್ರಿಸಲು ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕಡಿಮೆ ಮಾಡಿದೆ. ಅಲ್ಲದೇ, ಉಕ್ಕು ಮತ್ತು ಪ್ಲಾಸ್ಟಿಕ್ ಉದ್ಯಮದಲ್ಲಿ ಬಳಸುವ ಕಚ್ಚಾ ಸಾಮಗ್ರಿಗಳ ಆಮದು ಸುಂಕವನ್ನೂ ಮನ್ನಾ ಮಾಡಿದೆ. ಇಂಧನ, ತರಕಾರಿ ಮತ್ತು ಅಡುಗೆ ಎಣ್ಣೆಗಳ ದರ ಹೆಚ್ಚಳದಿಂದಾಗಿ ಸಗಟು ದರ ಹಣದುಬ್ಬರವು ಏಪ್ರಿಲ್‌ನಲ್ಲಿ ದಾಖಲೆಯ ಶೇ.15.8ಕ್ಕೆ ಏರಿಕೆ ಆಗಿದೆ. ಚಿಲ್ಲರೆ ಹಣದುಬ್ಬರವು 8 ವರ್ಷಗಳ ಗರಿಷ್ಠ ಮಟ್ಟವಾದ ಶೇ.7.79ಕ್ಕೆ ತಲುಪಿದೆ. ಹಣದುಬ್ಬರ ಏರಿಕೆ ಆಗಿರುವುದನ್ನು ಗಮನದಲ್ಲಿ ಇಟ್ಟುಕೊಂಡು ಆರ್‌ಬಿಐ ದಿಢೀರ್ ಸಭೆ ನಡೆಸಿ ರೆಪೊ ದರವನ್ನು ಶೇ.0.40ರಷ್ಟು ಇಳಿಕೆ ಮಾಡಿದೆ. ಡಿಜಿಟಲ್ ಕರೆನ್ಸಿಯನ್ನು ಪರಿಚಯಿಸುವ ಕುರಿತು ಇರುವ ಸಾಧಕ–ಬಾಧಕಗಳನ್ನು ಪರಿಶೀಲಿಸಲಾಗುತ್ತಿದೆ.

# ಜಿಎಸ್‌ಟಿ ಸಂಖ್ಯೆ ಅನ್‌ಬ್ಲಾಕ್ ಮಾಡುವಲ್ಲಿ ತೆರಿಗೆ ಇಲಾಖೆ ವಿಳಂಬ : ಉದ್ಯಮಿಯ ಅಳಲು

**ಬೆಂಗಳೂರು :** ಜಿಎಸ್‌ಟಿ ಪಾವತಿ ವಿಳಂಬದ ಕಾರಣಕ್ಕೆ ಉದ್ಯಮಿಯೊಬ್ಬರ ಜಿಎಸ್‌ಟಿಐಎನ್ ಸಂಖ್ಯೆಯನ್ನು ಬ್ಲಾಕ್ ಮಾಡಿರುವ ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಇಲಾಖೆಗೆ ಇದೀಗ ಅದನ್ನು ಅನ್‌ಬ್ಲಾಕ್ ಮಾಡಲು ತಿಳಿಯುತ್ತಿಲ್ಲ ಎಂದರೆ ಇಂತಹದೊಂದು ಸನ್ನಿವೇಶವನ್ನು ಯಾವ ರೀತಿ ಸ್ವೀಕರಿಸಬೇಕು ಎಂಬ ಗೊಂದಲ ರಾಜ್ಯದ ಉದ್ಯಮಿಗಳಿಗೆ ಸೃಷ್ಟಿಯಾಗುವಂತಾಗಿದೆ. ಸ್ವತಃ ಒಬ್ಬ ಉದ್ಯಮಿಯೇ ತಮಗಾದ ಸಮಸ್ಯೆಯ ಬಗ್ಗೆ ಮಾಧ್ಯಮಗಳ ಜೊತೆ ಅಳಲು ತೋಡಿಕೊಂಡಿದ್ದಾರೆ.

ಪೂರ್ಣ ವಿವರ: ಪಾವತಿ ವಿಳಂಬದಿಂದ ರದ್ದಾದ ಜಿಎಸ್‌ಟಿಐಎನ್ ಅನ್ನು ಅನ್‌ಬ್ಲಾಕ್ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ರಾಜ್ಯ ಜಿಎಸ್‌ಟಿ ಇಲಾಖೆ ಅಧಿಕಾರಿಗಳು ಹೇಳಿದ ನಂತರ ಉದ್ಯಮಿ, ನಿರ್ದೇಶಕ ಗಿರೀಶ್ ತೀವ್ರ ಸಮಸ್ಯೆ ಎದುರಿಸುತ್ತಿರುವುದಾಗಿ ದೂರಿದ್ದಾರೆ. ಈ ಸಂಬಂಧ ಮಾಹಿತಿ ನೀಡಿರುವ ಅವರು, ರಾಜ್ಯದ ಜಿಎಸ್‌ಟಿ ಅಧಿಕಾರಿಗಳೇ ಈ ಬಗ್ಗೆ ಅಸಹಾಯಕತೆ ವ್ಯಕ್ತಪಡಿಸಿರುವುದಾಗಿ ತಿಳಿಸಿದ್ದಾರೆ.

ಇ–ಆಡಳಿತದಲ್ಲಿ ಇತರ ರಾಜ್ಯಗಳಿಗಿಂತ ತಾನು ಮುಂದಿದೆ ಎಂದು ಕರ್ನಾಟಕ ಹೇಳಿಕೊಂಡಿದೆ. ಆದರೆ, ಮತ್ತೊಂದೆಡೆ ಬ್ಲಾಕ್ ಮಾಡಿದ ಡಿಜಿಟಲ್ ತೆರಿಗೆ ಖಾತೆಯನ್ನು ಅನ್‌ಬ್ಲಾಕ್ ಮಾಡುವುದು ಸ್ವತಃ ಇಲಾಖೆಗೆ ಕಷ್ಟವಾಗಿದೆ. ಮೇಲ್ಮನವಿ ಆದೇಶದ ಹೊರತಾಗಿಯೂ ಕಳೆದ ಎರಡು ತಿಂಗಳಿನಿಂದ ವ್ಯಾಪಾರ ಸಂಸ್ಥೆಯೊಂದರ ಸರಕು ಮತ್ತು ಸೇವಾ ತೆರಿಗೆ ಗುರುತಿನ ಸಂಖ್ಯೆ (GSTIN) ಅನ್ನು ಮರುಸ್ಥಾಪಿಸಲು ವಾಣಿಜ್ಯ ತೆರಿಗೆ ಇಲಾಖೆಗೆ ಸಾಧ್ಯವಾಗಲಿಲ್ಲ. ಇದರ ಪರಿಣಾಮವಾಗಿ ಕಂಪನಿಯ ಮಾಲೀಕರಿಗೆ ಇ–ವೇ ಬಿಲ್ ಸಂಖ್ಯೆಯನ್ನು ಉತ್ಪಾದಿಸಲು ಸಾಧ್ಯವಾಗದೆ, ಗ್ರಾಹಕರು ಈಗಾಗಲೇ ಇರಿಸಿದ ಆರ್ಡರ್‌ಗಳಿಗೆ ತಮ್ಮ ಸರಬರಾಜುಗಳನ್ನು ಮುಂದುವರಿಸಲು ಸಾಧ್ಯವಾಗುತ್ತಿಲ್ಲ.

ಆಡ್ ಇಂಜಿನಿಯರಿಂಗ್ ಕಾಂಪೊನೆಂಟ್ಸ್ ಇಂಡಿಯಾ ಲಿಮಿಟೆಡ್‌ನ ನಿರ್ದೇಶಕ ಗಿರೀಶ್ ಅವರಿಗೆ ಜಿಎಸ್‌ಟಿ ಸಂಬಂಧಿತ ಸಮಸ್ಯೆಗಳು 2021 ರಲ್ಲಿ ಪ್ರಾರಂಭವಾದವು. ಕೋವಿಡ್ 19 ಸಾಂಕ್ರಾಮಿಕದ ಕಾರಣದಿಂದಾಗಿ ಅವರ ಕಂಪನಿಗೆ ಜಿಎಸ್‌ಟಿ ಪಾವತಿಸುವುದು ಸವಾಲಾಗಿ ಪರಿಣಮಿಸಿತು. ಅನಂತರ ಅವರು ಕಂಪನಿಯನ್ನು ತಾತ್ಕಾಲಿಕವಾಗಿ ಮುಚ್ಚಲಾಯಿತು. ಹಾಗಿದ್ದರೂ, ಅವರು ತಮ್ಮ ಉದ್ಯೋಗಿಗಳನ್ನು ಉಳಿಸಿಕೊಂಡು ಅವರ ವೇತನವನ್ನು ಮುಂದುವರೆಸಿದರು.

ಇಲಾಖೆಯು ಜಿಎಸ್‌ಟಿಯ ವಿಳಂಬ ಪಾವತಿಯನ್ನು ಉಲ್ಲೇಖಿಸಿ, ಅವರ 15–ಅಂಕಿಯ ಜಿಎಸ್‌ಟಿಐಎನ್ ಅನ್ನು ಅಮಾನತುಗೊಳಿಸಿದೆ. ಜಿಎಸ್‌ಟಿಐಎನ್ ಇಲ್ಲದೆ, ಅವರು ಯಾವುದೇ ವ್ಯಾಪಾರ ವಹಿವಾಟು ನಡೆಸಲು ಸಾಧ್ಯವಿಲ್ಲ. ಈ ಕಂಪನಿಯು ಕತ್ತರಿಸುವ ಸಲಕರಣೆಗಳು ಮತ್ತು ರಕ್ಷಣಾ ಉಪಕರಣಗಳ ಘಟಕಗಳನ್ನು ತಯಾರಿಸುತ್ತದೆ ಮತ್ತು ಪೂರೈಸುತ್ತದೆ.

ಜಿಎಸ್‌ಟಿ ಪಾವತಿಯಾಗದ ಕಾರಣವನ್ನು ತೋರಿಸಲು ಸಂಸ್ಥೆಯ ನಿರ್ದೇಶಕರಿಗೆ ಇಲಾಖೆ ಎರಡು ನೋಟಿಸ್‌ಗಳನ್ನು ಜಾರಿಗೊಳಿಸಿತ್ತು. ಪರಿಸ್ಥಿತಿ ಸುಧಾರಿಸಿದ ನಂತರ, ಅವರು 2 ಲಕ್ಷ ರೂ. ಗೂ ಹೆಚ್ಚು ವಿಳಂಬ ಪಾವತಿ ಶುಲ್ಕವನ್ನು ಪಾವತಿಸಿದರು ಮತ್ತು ಜಿಎಸ್‌ಟಿ ಮೊತ್ತವಾಗಿ 17.5 ಲಕ್ಷ ರೂ.




ಗಳನ್ನು 2021ರ ಮಾರ್ಚ್‌ಗೆ ಬದಲಾಗಿ 2021ರ ಡಿಸೆಂಬರ್‌ನಲ್ಲಿ ಪಾವತಿಸಿದರು. ಅವರು ತಡವಾಗಿ ಪಾವತಿ ಶುಲ್ಕವನ್ನೂ ಪಾವತಿಸಿದ್ದಾರೆ.

ಹೀಗಾಗಿ ನಿಯಮಗಳ ಪ್ರಕಾರ, ಜಿಎಸ್‌ಟಿಐಎನ್ ಅನ್ನು ಮರು ಚಾಲನೆಗೊಳಿಸಬೇಕಿತ್ತು. ಹಲವಾರು ಮನವಿಗಳ ಹೊರತಾಗಿಯೂ ಅದು ಸಾಧ್ಯವಾಗದಿದ್ದಾಗ, ಅವರು ಸರಕು ಮತ್ತು ಸೇವಾ ತೆರಿಗೆ (ಅಪೀಲುಗಳು)–2 ಬೆಂಗಳೂರು ಜಂಟಿ ಆಯುಕ್ತರ ಮುಂದೆ ಮನವಿಯನ್ನು ಸಲ್ಲಿಸಿದರು, ತಮ್ಮ ರದ್ದುಗೊಂಡ ಜಿಎಸ್‌ಟಿಐಎನ್ ಅನ್ನು ಮರುಸ್ಥಾಪಿಸುವಂತೆ ಮನವಿ ಮಾಡಿದರು.

ಬಡ್ಡಿ ಮತ್ತು ವಿಳಂಬ ಶುಲ್ಕದೊಂದಿಗೆ ತೆರಿಗೆಗಳನ್ನು ಪಾವತಿಸಿದ್ದರೂ, ಜಿಎಸ್‌ಟಿಐಎನ್ ಅನ್ನು ಮರುಸ್ಥಾಪಿಸಲಾಗಿಲ್ಲ. ಸಂಸ್ಥೆಯ ನಿರ್ದೇಶಕರು ಡಿಸೆಂಬರ್ 21 ರಿಂದ ಫೆಬ್ರವರಿ 2022 ರ ವರೆಗಿನ ಜಿಎಸ್‌ಟಿ ರಿಟರ್ನ್ಸ್ ಅನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ. ನೋಂದಣಿ ರದ್ದತಿಯನ್ನು ಹಿಂತೆಗೆದುಕೊಳ್ಳುವಂತೆ ಕೋರಿ ಮೇಲ್ಮನವಿ ನ್ಯಾಯಾಧಿಕರಣದ ಮುಂದೆ ಹೋಗುವುದು ಅವರಿಗೆ ಅನಿವಾರ್ಯವಾಯಿತು. ಮಾರ್ಚ್ 31, 2022 ರಂದು, ಟ್ರಿಬ್ಯೂನಲ್ ಗಿರೀಶ್ ಅವರ ವಾದವನ್ನು ಎತ್ತಿಹಿಡಿದಿದೆ ಮತ್ತು ಜಿಎಸ್‌ಟಿಐಎನ್ ಅನ್ನು ಮರುಸ್ಥಾಪಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಿತು.

ಆದರೆ ಇಂದಿನ ವರೆಗೂ ವಾಣಿಜ್ಯ ತೆರಿಗೆ ಇಲಾಖೆಯು ನೋಂದಣಿ ರದ್ದು ಪ್ರಕ್ರಿಯೆ ಸ್ಥಗಿತಗೊಳಿಸಿಲ್ಲ. "ನಾನು ಹಲವಾರು ಗ್ರಾಹಕರಿಗೆ ಉತ್ಪನ್ನಗಳನ್ನು ಪೂರೈಸಬೇಕಾಗಿದೆ. ಜಿಎಸ್‌ಟಿ ಸಂಖ್ಯೆ ಇಲ್ಲದೆ, ನಾನು ಇ–ವೇ–ಬಿಲ್ ಅನ್ನು ಹೇಗೆ ತಯಾರಿಸಲು ಸಾಧ್ಯ? ನಾನು ಈ ಅತಿಯಾದ ವಿಳಂಬಕ್ಕೆ ಕಾರಣವನ್ನು ಕೋರಿ ಇಲಾಖೆಯ ಅನೇಕ ಅಧಿಕಾರಿಗಳನ್ನು ಸಂಪರ್ಕಿಸಿದ್ದೇನೆ. ಅವರು ಈ ಬಗ್ಗೆ – ನೋಂದಣಿಯನ್ನು ಮರುಸ್ಥಾಪಿಸುವ ವಿಧಾನ ತಿಳಿದಿಲ್ಲ ಎಂದು ಹೇಳುತ್ತಾರೆ. ಅಂತಹ ಹಾರಿಕೆಯ ಉತ್ತರವನ್ನು ಒಪ್ಪಿಕೊಳ್ಳುವುದಾದರೂ ಹೇಗೆ? ಇದು ಇ–ಆಡಳಿತದ ಯುಗ. "ಸರ್ಕಾರಿ ಇಲಾಖೆಯು ಕಂಪನಿಯ ನೋಂದಣಿಯನ್ನು ರದ್ದುಗೊಳಿಸುವ ಸಾಮರ್ಥ್ಯವನ್ನು ಹೊಂದಿರುವುದೇನೋ ಸರಿ. ಆದರೆ ನ್ಯಾಯಾಲಯದ ಆದೇಶದ ಹೊರತಾಗಿಯೂ ಅದನ್ನು ಮರುಸ್ಥಾಪಿಸಲು ಸಾಧ್ಯವಾಗುವುದಿಲ್ಲ ಏಕೆ?" ಎಂಬುದು ಗಿರೀಶ್ ಅವರ ಪ್ರಶ್ನೆ. ಇಲಾಖೆಯ ಕಚೇರಿಗೆ ಹಲವಾರು ಬಾರಿ ಮಾಡಿದ ಅಲೆದಾಟ, ದೂರವಾಣಿ ಕರೆಗಳು ವ್ಯರ್ಥವಾಗಿವೆ ಎಂದು ಗಿರೀಶ್ ಬೇಸರ ವ್ಯಕ್ತಪಡಿಸಿದ್ದಾರೆ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






**ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನಲ್ಲಿ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ (ಬಿಒಎಂ) ರಚಿಸಲಾಗಿದ್ದು, ಸದಸ್ಯರ ಹೆಸರನ್ನು ಭಾರತೀಯ ರಿಜರ್ವ್ ಬ್ಯಾಂಕಿಗೆ ಕಳುಹಿಸಲಾಗಿದೆ. ಬಿಒಎಂ ನ ಸಭೆ ಜರುಗಿಸುವಂತೆ ರಿಜರ್ವ್ ಬ್ಯಾಂಕಿನಿಂದ ಸೂಚನೆ ಬಂದಿದೆ. ರಿಜರ್ವ್ ಬ್ಯಾಂಕಿನ "ಫಿಟ್ ಮತ್ತು ಪ್ರಾಫರ್" ಮಾನದಂಡದಂತೆ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿ ನೇಮಕಗೊಳ್ಳಲು ಕನಿಷ್ಠ 35 ವರ್ಷ ವಯಸ್ಸು ಮತ್ತು ಕನಿಷ್ಠ 8 ವರ್ಷಗಳ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಅನುಭವ ಅಗತ್ಯವಿರುತ್ತದೆ. ನಮ್ಮ ಹಾಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಈ ಮಾನದಂಡದಡಿ ಬಾರದಿರುವುದರಿಂದ ಅವರ ಹೆಸರನ್ನು ರಿಜರ್ವ್ ಬ್ಯಾಂಕಿಗೆ ಕಳುಹಿಸಿರಲಿಲ್ಲ. ಮುಖ್ಯಕಾರ್ಯನಿರ್ವಹಣಾಧಿಕಾರಿಯು ಬಿಒಎಂನ ಪದನಿಮಿತ್ತ ಅಧಿಕಾರಿಯಾಗಿರುವುದರಿಂದ, ಬಿಒಎಂ ಗಾಗಿಯೇ, ರಿಜರ್ವ್ ಬ್ಯಾಂಕಿನ ಮಾನದಂಡ ಹೊಂದಿರುವ ಇನ್ನೊಬ್ಬ ಮುಖ್ಯಕಾರ್ಯ ನಿರ್ವಹಣಾಧಿಕಾರಿಯನ್ನು ನೇಮಿಸಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ತುಮಕೂರು ಜಿಲ್ಲೆ.**

**ಉತ್ತರ :** ರಿಜರ್ವ್ ಬ್ಯಾಂಕು ಬಿಒಎಂ ರಚನೆ ಬಗ್ಗೆ ನೀಡಿದ ಮಾರ್ಗಸೂಚಿಯು ಅದು ಜಾರಿಯಾದ ದಿನಾಂಕದಿಂದ ಅಂದರೆ, ಡಿಸೆಂಬರ್ 31, 2019ರಿಂದ ಕಾರ್ಯರೂಪಕ್ಕೆ ಬರುವುದು. ಆದ್ದರಿಂದ, ನಿಮ್ಮ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯ ನೇಮಕ ಡಿಸೆಂಬರ್ 31, 2019ಕ್ಕಿಂತ ಮೊದಲು ಆಗಿದ್ದರೆ ಅವರೆ ಅಧಿಕಾರದಲ್ಲಿ ಮುಂದುವರೆಯಬಹುದು ಮತ್ತು ಬಿಒಎಂ ಸಭೆಯಲ್ಲಿ ಭಾಗವಹಿಸಬಹುದು. ಬ್ಯಾಂಕಿನಲ್ಲಿ ಇಬ್ಬರು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಅವಕಾಶವಿಲ್ಲ. ಈಗಿರುವ ಮುಖ್ಯಕಾರ್ಯನಿರ್ವಹಣಾಧಿಕಾರಿ ಡಿಸೆಂಬರ್ 31, 2019ಕ್ಕಿಂತ ಮೊದಲು ನೇಮಕಗೊಂಡಿದ್ದರೆ ಅವರ ಹೆಸರನ್ನೇ ರಿಜರ್ವ್ ಬ್ಯಾಂಕಿಗೆ ಕಳುಹಿಸಿ. ಮುಂದೆ ವ್ಯವಸ್ಥಾಪಕ ನಿರ್ದೇಶಕರ (ಎಂ.ಡಿ) ನೇಮಕಾತಿ ಬಗ್ಗೆ ನ್ಯಾಯಾಲಯದ ತಡೆಯಾಜ್ಞೆ ತೆರವಾದರೆ ಪರಿಸ್ಥಿತಿ ಬದಲಾಗಬಹುದು.

**02. ನಮ್ಮ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಆ ಹುದ್ದೆಯಲ್ಲಿ ಸುದೀರ್ಘ ಕಾಲ ಸೇವೆಯ ನಂತರ ಜೂನ್ ತಿಂಗಳಲ್ಲಿ ನಿವೃತ್ತರಾಗುತ್ತಿದ್ದರು. ಅವರನ್ನೇ ಎಂ.ಡಿ. ಯಾಗಿ ಆಯ್ಕೆ ಮಾಡಿ ಅವರ ಸೇವೆಯನ್ನು ಮುಂದಿನ 5 ವರ್ಷಗಳವರೆಗೆ ಮುಂದುವರೆಸಿ, ರಿಜರ್ವ್ ಬ್ಯಾಂಕಿನ ಒಪ್ಪಿಗೆಗಾಗಿ ಕಳುಹಿಸಲಾಗಿತ್ತು. ಎಂ.ಡಿ. ನೇಮಕಾತಿಗೆ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುವುದರಿಂದ ಹಾಲಿ ಮುಖ್ಯಕಾರ್ಯನಿರ್ವಾಹಕರು 60 ವರ್ಷಕ್ಕೆ ಅಂದರೆ ಜೂನ್, 2022ರಲ್ಲಿ ಅನಿವಾರ್ಯವಾಗಿ ನಿವೃತ್ತರಾಗಬೇಕಾಗಿದೆ. ನಮ್ಮ ಬ್ಯಾಂಕಿನಲ್ಲಿ ಬಿಒಎಂ ರಚನೆಯಾಗಿರುವುದರಿಂದ ಹೊಸ ಕಾರ್ಯನಿರ್ವಹಣಾಧಿಕಾರಿಯ ನೇಮಕಾತಿಗೆ ರಿಜರ್ವ್ ಬ್ಯಾಂಕಿನ ಪೂರ್ವಾನುಮತಿಯ ಅಗತ್ಯವಿರುತ್ತದೆ. ಆದರೆ, ಬ್ಯಾಂಕಿನಲ್ಲಿ ಉಸ್ತುವಾರಿ ಕಾರ್ಯನಿರ್ವಹಣಾಧಿಕಾರಿಯ ನೇಮಕಾತಿ ಬಗ್ಗೆ ಯೋಚಿಸಲಾಗುತ್ತಿದೆ. ಈ ಕ್ರಮ ನ್ಯಾಯಯುತವಾಗಿದೆಯೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬಿಜಾಪುರ ಜಿಲ್ಲೆ.**

**ಉತ್ತರ :** ನಿಮ್ಮ ಬ್ಯಾಂಕಿನಲ್ಲಿ ಬಿಒಎಂ ರಚನೆಯಾಗಿರುವುದರಿಂದ, ಉಸ್ತುವಾರಿ (In-charge) ಮುಖ್ಯಕಾರ್ಯನಿರ್ವಹಣಾಧಿಕಾರಿಯ ನೇಮಕಾತಿಗೂ ರಿಜರ್ವ್ ಬ್ಯಾಂಕಿನ ಪೂರ್ವಾನುಮತಿಯ ಅಗತ್ಯವಿದೆ. ಎಂ.ಡಿ. ನೇಮಕಾತಿಗೆ ಬಂದ ತಡೆಯಾಜ್ಞೆಯಿಂದ ಉಂಟಾದ ವಿಶೇಷ ಪರಿಸ್ಥಿತಿಯನ್ನು ಉಲ್ಲೇಖಿಸಿ, ಉಸ್ತುವಾರಿ ಮುಖ್ಯಕಾರ್ಯನಿರ್ವಹಣಾಧಿಕಾರಿಯ ನೇಮಕಾತಿಯ ಅಂಗೀಕಾರಕ್ಕಾಗಿ ರಿಜರ್ವ್ ಬ್ಯಾಂಕಿಗೆ ತಕ್ಷಣ ಅರ್ಜಿ ಸಲ್ಲಿಸಿ.

# ಪ್ಯಾನ್-ಆಧಾರ್ ಲಿಂಕ್ ಮಾಡದಿದ್ರೆ ದಂಡ

**ಹೊಸದಿಲ್ಲಿ :** ಪ್ಯಾನ್–ಆಧಾರ್ ನಂಬರ್ ಜೋಡಣೆ ಮಾಡುವ (ಲಿಂಕ್) ಪ್ರಕ್ರಿಯೆಯನ್ನು ಮುಂದೂಡಬಾರದು. ಜುಲೈ 1ರೊಳಗೆ ಲಿಂಕ್ ಮಾಡಿದರೆ ರೂ.500 ದಂಡ, ಬಳಿಕ ಲಿಂಕ್ ಮಾಡಿದರೆ 1,000 ರೂಪಾಯಿ ದಂಡ ತೆರಬೇಕಾಗುತ್ತದೆ. ಆಧಾರ್‌ಕಾರ್ಡ್‌ನೊಂದಿಗೆ ಪ್ಯಾನ್ ಕಾರ್ಡ್ ಲಿಂಕ್ ಮಾಡಲು 2022ರ ಮಾರ್ಚ್ 31 ಕಡೆಯ ದಿನವಾಗಿದ್ದು, ಅದನ್ನು 2023ರ ಮಾರ್ಚ್ 31ರ ತನಕ ಗಡುವನ್ನು ಸರ್ಕಾರ ವಿಸ್ತರಿಸಿದೆ. ಆದರೆ, ಇನ್ನೂ ಒಂದು ವರ್ಷ ಸಮಯವಿದೆ ಎಂದು ಸುಮ್ಮನಾದರೆ ದಂಡದ ಪ್ರಮಾಣ ಏರಿಕೆಯಾಗಲಿದೆ. ಚಲನ್ ನಂ. ಬಳಸಿ ದಂಡ ಶುಲ್ಕವನ್ನು ತೆರಬೇಕು. ಹಣ ಪಾವತಿಸಿದ 4–5 ದಿನದ ನಂತರ ಲಿಂಕ್ ಪ್ರಕ್ರಿಯೆ ಮಾಡಬೇಕು.

ಪ್ರಸ್ತುತ ಲಿಂಕ್ ಮಾಡಬೇಕಾದರೆ ನಿರ್ದಿಷ್ಟ ಶುಲ್ಕವನ್ನು ಪಾವತಿಸಬೇಕು. ಏಪ್ರಿಲ್ 1ರಿಂದಲೇ ಅನ್ವಯವಾಗುವಂತೆ 500ರೂ. ದಂಡವನ್ನು ಕಟ್ಟಬೇಕು. ಇನ್ನೂ ಸುಮ್ಮನಿದ್ದರೆ, ಜುಲೈ 1ರಿಂದ ಲಿಂಕ್ ಪ್ರಕ್ರಿಯೆಗೆ ದುಪ್ಪಟ್ಟು ದಂಡ ಅಂದರೆ 1,000 ರೂಪಾಯಿ ಪಾವತಿ ಮಾಡಬೇಕಾಗುತ್ತದೆ. ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಪ್ರಕಟಣೆಯಲ್ಲಿ ದಂಡ ಹೆಚ್ಚಳದ ಸಂಗತಿಯನ್ನು ಹೇಳಲಾಗಿದೆ.

### ಲಿಂಕ್ ಮಾಡುವುದು ಹೇಗೆ?

- ಸಮೀಪದ ಆಧಾರ್ ಕೇಂದ್ರಗಳಿಗೆ, ಪ್ಯಾನ್ ಸೇವೆಗಳನ್ನು ನೀಡುವ ಕೇಂದ್ರಗಳು, ಎನ್‌ಎಸ್‌ಡಿಎಲ್ ಅಥವಾ ಯುಟಿಐಐಟಿಎಸ್‌ಎಲ್ ಕೇಂದ್ರಗಳಿಗೆ ತೆರಳಿ ಅಗತ್ಯವಾದ ದಾಖಲೆಗಳನ್ನು ಸಲ್ಲಿಸಿ, ಪ್ಯಾನ್–ಆಧಾರ್ ನಂಬರ್‌ಗಳನ್ನು ಲಿಂಕ್ ಮಾಡಬಹುದು.
- ನೀವು ಆದಾಯ ತೆರಿಗೆ ಇಲಾಖೆಯ ಇ–ಫೈಲಿಂಗ್ ಪೋರ್ಟಲ್‌ಗೆ ನೋಂದಣಿಯಾಗಿದ್ದರೆ, ಅಲ್ಲಿ ಲಾಗಿನ್ ಆಗಬೇಕು. ಅಲ್ಲಿ ಆಧಾರ್ ಲಿಂಕ್ ಆಯ್ಕೆಯನ್ನು ನೀಡಲಾಗಿದೆ.
- ನೀವು ಇ–ಫೈಲಿಂಗ್ ವೆಬ್‌ಸೈಟ್‌ನಲ್ಲಿ ನೋಂದಣಿ ಹೊಂದಿಲ್ಲದಿದ್ದರೆ, ನೇರ www.incometax.gov.in ಜಾಲತಾಣಕ್ಕೆ ಭೇಟಿ ನೀಡಬೇಕು. ಅಲ್ಲಿ 'ಲಿಂಕ್ ಆಧಾರ್' ಎನ್ನುವ ಆಯ್ಕೆ ಇದೆ. ನಿಮ್ಮ ಪ್ಯಾನ್, ಆಧಾರ್ ಸಂಖ್ಯೆ, ಹೆಸರು, ಮೊಬೈಲ್ ನಂಬರ್ ನಮೂದಿಸಿ ಲಿಂಕಿಂಗ್ ಪ್ರಕ್ರಿಯೆ ಪೂರ್ಣಗೊಳಿಸಬಹುದು.

**ಎಸ್‌ಎಂಎಸ್ ಆಯ್ಕೆಯೂ ಇದೆ :** UIDPAN<12 digit Aadhaar><10 digit PAN> ಈ ಮಾದರಿಯಲ್ಲಿ 567678 ಅಥವಾ 56161 ಸಂಖ್ಯೆಗೆ ಎಸ್‌ಎಂಎಸ್ ಕಳಿಸಬಹುದು.

**31.03.2023ರ ಬಳಿಕ ನಿಷ್ಕ್ರಿಯ! :** ಪ್ಯಾನ್–ಆಧಾರ್ ಲಿಂಕ್ ಪ್ರಕ್ರಿಯೆಯನ್ನು 2023ರ ಮಾರ್ಚ್ 31ರೊಳಗೆ ಪೂರ್ಣಗೊಳಿಸದಿದ್ದರೆ, ಪ್ಯಾನ್ ಕಾರ್ಡ್ ನಿಷ್ಕ್ರಿಯವಾಗುತ್ತದೆ.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಇತ್ತೀಚೆಗೆ ಪ್ರಕಟವಾದ ಯುಪಿಎಸ್ಸಿ ಪರೀಕ್ಷೆ ಫಲಿತಾಂಶದಲ್ಲಿ, ಮಗಳಿಗೆ ವಿದ್ಯೆ ಕೊಡಿಸಲು ಸಾಲ ಮಾಡಿ ಆತ್ಮಹತ್ಯೆಗೆ ಶರಣಾಗಿದ್ದ ಮಹಾಲಿಂಗಪ್ಪ ಅವರ ಮಗಳಾದ ಅರುಣಾ 308ನೇ ಸ್ಥಾನ ಪಡೆದಿದ್ದಾರೆ.
- ಯುಪಿಎಸ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ತಾನು ಪಾಸ್ ಆಗಿದ್ದೇನೆಂದು ಜಾರ್ಖಂಡ್ ರಾಜ್ಯದ 24 ವರ್ಷದ ದಿವ್ಯಾ ಪಾಂಡೆ ಸಂಭ್ರಮಿಸಿದ್ದಳು. ಜಿಲ್ಲಾಡಳಿತ ಸೇರಿದಂತೆ ಹಲವು ಸಂಘ ಸಂಸ್ಥೆಗಳು ಆಕೆಯನ್ನು ಸನ್ಮಾನಿಸಿದ್ದವು ಆದರೆ, ಇದೀಗ ಆಕೆ ನಾನು ಪಾಸ್ ಆಗಿಲ್ಲ ದಯವಿಟ್ಟು ಕ್ಷಮಿಸಿಬಿಡಿ ಎಂದು ಕೈ ಮುಗಿದಿದ್ದಾಳೆ.
- ಕೆಲ ದಿನಗಳ ಹಿಂದೆ ತನ್ನ ತಾಯಿಯೊಂದಿಗೆ ಹಿಮಾಲಯದ ಪ್ರವಾಸಕ್ಕೆಂದು ಬಂದಿದ್ದ ಉತ್ತರ ಪ್ರದೇಶದ ಹರ್ವಿಂದರ್ ಕೌರ್ ಈಗ ಮನೆಗೆ ಹಿಂದಿರುಗಲು ಸುತಾರಾಂ ಒಪ್ಪುದಿರುವ ವಿಚಾರ ಉತ್ತರಾಖಂಡ ಸರಕಾರದ ತಲೆನೋವಿಗೆ ಕಾರಣವಾಗಿದೆ.
- ರೆಸ್ಟೋರೆಂಟ್‌ಗಳು ಗ್ರಾಹಕರಿಗೆ ಸೇವಾ ಶುಲ್ಕ ವಿಧಿಸುವಂತಿಲ್ಲ ಆದರೆ, ಗ್ರಾಹಕರು ಸ್ವ ಇಚ್ಛೆಯಿಂದ ಪ್ರತ್ಯೇಕವಾಗಿ ಟಿಪ್ಸ್ ನೀಡಬಹುದು ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವರು ಹೇಳಿದ್ದಾರೆ.
- ಕಳೆದ 14 ದಿನಗಳಿಂದಲೂ ಭಾರತೀಯ ಜೀವ ವಿಮಾ ನಿಗಮದ ಷೇರುಗಳು ನಿರಂತರವಾಗಿ ಕುಸಿತ ಕಾಣುವುದರೊಂದಿಗೆ ಷೇರುದಾರರು ಬರೋಬ್ಬರಿ ರೂ. 94, 116 ಕೋಟಿ ನಷ್ಟ ಅನುಭವಿಸಿದ್ದಾರೆ.
- ಭಾರತ ಮೂಲದ 14 ವರ್ಷದ ವಿದ್ಯಾರ್ಥಿನಿ ಹರಿಣಿ ಲೋಗನ್ ವಾಷಿಂಗ್ಟನ್‌ನಲ್ಲಿ ನಡೆದ ಸ್ಕ್ರಿಪ್ಸ್ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಟೂರ್ನಿಯಲ್ಲಿ ಅಭೂತಪೂರ್ವ ಜಯ ಸಾಧಿಸಿದ್ದಾರೆ.
- ಕ್ಯಾಲಿಕಟ್ ಮೂಲದ ಆರ್.ವಿ. ಸಲು ಎನ್ನುವವರು ಅಭಿವೃದ್ಧಿಪಡಿಸಿರುವ ಸೌರಶಕ್ತಿ ಚಾಲಿತ ಎಲೆಕ್ಟ್ರಿಕ್ ಕಾರಿನಲ್ಲಿ ಮೈಲಿಗಟ್ಟಲೇ ದೂರ ಚಾಲನೆ ಮಾಡಬಹುದು. ಅದು ರಸ್ತೆಯಲ್ಲಿ ಹೋಗುವಾಗ ಚಾರ್ಜ್ ಮುಗಿದಾಗ ಅವರು ಆತಂಕಪಡಬೇಕಿಲ್ಲ ಮೊಬೈಲ್‌ನೊಂದಿಗೆ ಅದರ ಮೇಲ್ಭಾವಣಿಯಲ್ಲಿ ಅಳವಡಿಸಿರುವ ಮೂರು ಸೌರ ಫಲಕಗಳಿಂದ ಕಾರು ಬ್ಯಾಟರಿ ಚಾರ್ಜ್ ಆಗುತ್ತದೆ.
- ಕೊಡಗು ಜಿಲ್ಲೆಯ ಕುಟ್ಟಂಡಿ ಗ್ರಾಮದ ನಿವಾಸಿಗಳಾದ 94ವರ್ಷದ ಪಿ ಬೋಪಯ್ಯ ಮತ್ತು 85 ವರ್ಷದ ಬೆಳಿಯಪ್ಪ ಸಹೋದರರು ಹಿರಿಯ ನಾಗರಿಕರಿಗಾಗಿ ನಡೆಯುವ ಪ್ಯಾನ್ ಇಂಡಿಯಾ ಮಾಸ್ಟರ್ ಗೇಮ್‌ನಲ್ಲಿ ಭಾಗವಹಿಸಿ ಪ್ರಶಸ್ತಿಗಳಿಸಿದ್ದಾರೆ.

## ಓದುಗರ ಅನಿಸಿಕೆ...




**ಅದು ಈಗ ನಿಜವಾಗಿದೆ :** ಆರ್.ಬಿ.ಐ. ವಾರ್ಷಿಕ ವರದಿಯಲ್ಲಿ ರೂ.2,000 ನೋಟುಗಳ ಚಲಾವಣೆಯ ಕುಸಿತ ಕಂಡುಬಂದಿದ್ದು, ಈ ವರ್ಷದ ಮಾರ್ಚ್ ಅಂತ್ಯದ ವೇಳೆಗೆ, ಒಟ್ಟು ಕರೆನ್ಸಿ ನೋಟುಗಳಲ್ಲಿ ರೂ.2000 ಪಾಲು ಶೇ.1.6ಕ್ಕೆ ಇಳಿದಿದೆ ಎಂದು ಹೇಳಲಾಗಿದೆ. ಈ ನೋಟುಗಳು ಚಲಾವಣೆಗೆ ಬಂದ ಸಮಯದಲ್ಲೇ ಇದರ ಉಪಯುಕ್ತತೆ ಬಗ್ಗೆ ಅನುಮಾನಗಳು ವ್ಯಕ್ತವಾಗಿದ್ದವು, ಅದು ಈಗ ನಿಜವಾಗಿದೆ.

**ವಿ.ಸೂರ್ಯನಾರಾಯಣ್ ರಾವ್., ಹಾಸನ**

**ವರ್ಷಗಳ ವೇದನೆ ತಪ್ಪುತ್ತಿತ್ತು :** ಒಂಬತ್ತು ವರ್ಷಗಳ ಹಿಂದೆ ಸೈಬರ್ ದಾಳಿಯಿಂದ ವಂಚನೆಗೊಳಗಾದ ಗ್ರಾಹಕನಿಗೆ ಬಡ್ಡಿಯೊಂದಿಗೆ 1.46 ಲಕ್ಷ ರೂಪಾಯಿಗಳನ್ನು ಬಡ್ಡಿ ಸಮೇತ ಪಾವತಿಸುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಧಿಕಾರಿಗಳಿಗೆ ತೆಲಂಗಾಣ ಗ್ರಾಹಕರ ಆಯೋಗವು ಸೂಚಿಸಿರುವುದು ಸರಿಯಾದ ಕ್ರಮವಾಗಿದೆ. ಬ್ಯಾಂಕು ಅಂದೇ ಗ್ರಾಹಕರ ದೂರಿಗೆ ಸ್ಪಂದಿಸಿದ್ದರೆ, ಬಡ್ಡಿಯ ದಂಡ ತೆರೆವುದು ತಪ್ಪುತ್ತಿತ್ತು, ಗ್ರಾಹಕರಿಗೂ ಇಷ್ಟು ವರ್ಷಗಳ ವೇದನೆ ತಪ್ಪುತ್ತಿತ್ತು.

**ಗಳಗನಾಥ ಎಇ.ಎಲ್., ಹಾವೇರಿ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.